ಕರ್ನಾಟಕ ಸರಕಾರ
(ಕಂದಾಯ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯಪುರ
Office of the Deputy Commissioner, Bijapur District,
Vijayapur 586101 (Karnataka)

ದರ್ಬಾರ ಹಾಲ್, ವಿಜಯಪುರ 586101 ☎ 08352 - 251289, 250479,
Fax: 08352 - 251289, 256666 E-Mail: dcbjpest@gmail.com

ಕ್ರ:ಕವಿ:ಸಿಬ್ಬಂದಿ:3ಸಿಆರ್.52/2014-15 ದಿನಾಂಕ 24-08-2015

ವಿಷಯ: ವಿಜಯಪುರ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು- ಪರಿಶೀಲನಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ಕುರಿತು.

---

**ಓದಲಾಗಿದೆ.**

1) ಗ್ರಾಮಲೆಕ್ಕಿಗರ ನೇರ ನೇಮಕಾತಿಗಾಗಿ ಪರಿಶೀಲನಾ ಪಟ್ಟಿ ಪ್ರಕಟಣೆ ದಿನಾಂಕ 10-08-2015
2) ಶ್ರೀ ಅಡಿವೆಪ್ಪ ಬಾಳಪ್ಪ ತೋರಣಗಟ್ಟಿ ಸಾಕೀನ ನಾವಲಗಟ್ಟಿ ತಾ.ಬೈಲಹೊಂಗಲ ಜಿ.ಬೆಳಗಾವಿ ಇವರ ಅರ್ಜಿಯು ದಿನಾಂಕ 14-08-2015
3) ಶ್ರೀ ರಾಹುಲ್ ರಾಠೋಡ ಸಾಕೀನ ಇಂಡಿ ಇವರ ಅರ್ಜಿಯು ದಿನಾಂಕ 19-08-2015

**ಪ್ರಸ್ತಾವನೆ**

ಮೇಲೆ ಓದಲಾದ (1) ರ ಮೇರೆಗೆ, ವಿಜಯಪುರ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳ ನೇರ ನೇಮಕಾತಿ ಕುರಿತು ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಆ ಮೇರೆಗೆ ಓದು (2) ರಡಿ ಶ್ರೀ ಅಡಿವೆಪ್ಪ ಬಾಳಪ್ಪ ತೋರಣಗಟ್ಟಿ ಸಾಕೀನ ನಾವಲಗಟ್ಟಿ ತಾ.ಬೈಲಹೊಂಗಲ ಜಿ.ಬೆಳಗಾವಿ ಇವರು ಸಲ್ಲಿಸಿದ ಅರ್ಜಿಯಲ್ಲಿ ತನ್ನ ಹೆಸರು ಪರಿಶೀಲನಾ ಪಟ್ಟಿಯಲ್ಲಿ ಇರುವುದಿಲ್ಲ. ತಾನು ಹಿಂದು ಲಿಂಗವಂತ (3ಬಿ) ಗ್ರಾಮೀಣ, ಕನ್ನಡ ಮಾಧ್ಯಮ ಮೀಸಲಾತಿಯನ್ನು ಹೊಂದಿರುತ್ತೇನೆ. ಹಾಗೂ 600/553 (92.16) ಅಂಕಗಳನ್ನು ಪಡೆದಿರುತ್ತೇನೆ. ಆದರೆ ತನಗಿಂತ ಕಡಿಮೆ ಅಂಕ ಪಡೆದವರ ಹೆಸರು ಬಂದಿರುತ್ತದೆ. ಪರಿಶೀಲಿಸಿ ತನಗೆ ನ್ಯಾಯ ಒದಗಿಸಕೊಡಲು ಕೋರಿರುತ್ತಾರೆ.

ಓದು (3) ನೇದವರಾದ ಶ್ರೀ ರಾಹುಲ್ ರಾಠೋಡ ಸಾಕೀನ ಇಂಡಿ ಇವರು ಸಲ್ಲಿಸಿದ ಅರ್ಜಿಯಲ್ಲಿ ತಾನು ಪಿ.ಯು.ಸಿ.ಯಲ್ಲಿ ಶೇಕಡಾ 89.83 ಇರುತ್ತದೆ ಹಾಗೂ ಕನ್ನಡ ಮಾಧ್ಯಮ ಪ್ರಮಾಣ ಪತ್ರ ಸಲ್ಲಿಸಿದ್ದು, ತನಗಿಂತ ಕಡಿಮೆ ಶೇಕಡಾ ಅಂಕ ಪಡೆದವರು ಆಯ್ಕೆಯಾಗಿದ್ದು, ಆದರೆ ತನ್ನನ್ನು ಆಯ್ಕೆಯಲ್ಲಿ ಬಿಟ್ಟಿದ್ದು ಇರುವುದರಿಂದ, ತನ್ನ ಹೆಸರನ್ನು ಸೇರ್ಪಡೆ ಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಅಡಿವೆಪ್ಪ ಬಾಳಪ್ಪ ತೋರಣಗಟ್ಟಿ ಸಾಕೀನ ನಾವಲಗಟ್ಟಿ ತಾ.ಬೈಲಹೊಂಗಲ ಜಿ.ಬೆಳಗಾವಿ ಇವರ ಹೆಸರು ಪರಿಶೀಲನಾ ಪಟ್ಟಿ ವರ್ಗೀಕರಣ 3 ಬಿ ಅ.ನಂ. 11 ರಲ್ಲಿ ಇರುತ್ತದೆ.

ಹಾಗೆಯೆ ಶ್ರೀ ರಾಹುಲ್ ರಾಠೋಡ ಇವರು ಕೋರಿಕೆಯನ್ನು ಪರಿಶೀಲಿಸಲಾಗಿ, ಸದರಿಯವರು ಪರಿಶಿಷ್ಟ ಜಾತಿ, ಕನ್ನಡ ಮಾಧ್ಯಮದಲ್ಲಿ ಗ್ರಾಮಲೆಕ್ಕಾಧಿಕಾರಿ ಹುದ್ದೆಗೆ ನೇಮಕಾತಿಗೆ ಕೋರಿಕೊಂಡಿದ್ದಾರೆ. ಹಾಗೂ ಶೇಕಡಾ 89.83 ಅಂಕಗಳನ್ನು ಪಡೆದಿರುವದಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಪತ್ರ ಸಂಖ್ಯೆ 414463 ನೋಂದಣಿ ಸಂಖ್ಯೆ 50439/2014 ರ ಪ್ರಕಾರ ಹೊಂದಿರುವುದಾಗಿ ಕಂಡು ಬರುತ್ತದೆ. ಆದರೆ ಪರಿಶೀಲನಾ ಪಟ್ಟಿಯನ್ನು 1:10 ಅನುಪಾತದಲ್ಲಿ ಪ್ರಕಟಿಸಲಾಗಿದ್ದು, ಪ.ಜಾತಿ ಕನ್ನಡ ಮಾಧ್ಯಮವು ಅಂತಿಮವಾಗಿ 91.5% ಅಂಕಗಳಿಗೆ ನಿಂತಿರುತ್ತದೆ. ಹೀಗಾಗಿ ಇವರು ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾಗಿರುವುದಿಲ್ಲ. ಕಾರಣ ಕೆಳಗಿನಂತೆ ಆದೇಶ.

**: ಆ ದೇ ಶ :**

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಶ್ರೀ ಅಡಿವೆಪ್ಪ ಬಾಳಪ್ಪ ತೋರಣಗಟ್ಟಿ ಸಾಕೀನ ನಾವಲಗಟ್ಟಿ ತಾ.ಬೈಲಹೊಂಗಲ ಜಿ.ಬೆಳಗಾವಿ ಇವರು ಹೆಸರು ಪರಿಶೀಲನಾ ಪಟ್ಟಿಯಲ್ಲಿ ಇರುತ್ತದೆ. ಕಾರಣ ಇವರ ಕೋರಿಕೆಯನ್ನು ಕೈಬಿಡಲಾಗಿದೆ.

ಹಾಗೆಯೇ ಶ್ರೀ ರಾಹುಲ್ ರಾಠೋಡ, ಇವರು ಪರಿಶಿಷ್ಟ-ಜಾತಿ-ಕನ್ನಡ ಮಾಧ್ಯಮದಲ್ಲಿ ಗ್ರಾಮಲೆಕ್ಕಾಧಿಕಾರಿ ಹುದ್ದೆಗೆ ನೇಮಕಾತಿಗೆ ಕೋರಿ, ಅವರು 89.83% ಅಂಕಗಳನ್ನು ಪಡೆದಿರುತ್ತಾರೆ. ಆದರೆ ಪರಿಶೀಲನಾ ಪಟ್ಟಿಯಲ್ಲಿ ಪ.ಜಾತಿ ಕನ್ನಡ ಮಾಧ್ಯಮವು ಅಂತಿಮವಾಗಿ 91.5% ಅಂಕಗಳಿಗೆ ನಿಂತಿರುತ್ತದೆ. ಹೀಗಾಗಿ ಇವರ ಹೆಸರು ಪರಿಶೀಲನಾ ಪಟ್ಟಿಯಲ್ಲಿ ಬಂದಿರುವುದಿಲ್ಲ. ಕಾರಣ ಅವರು ಅರ್ಹತೆಯನ್ನು ಹೊಂದದೆ ಇರುವುದರಿಂದ, ಅವರ ಮನವಿಯನ್ನು ತಿರಸ್ಕರಿಸಲಾಗಿದೆ.

ಜಿಲ್ಲಾಧಿಕಾರಿಗಳು
ವಿಜಯಪುರ

ಪ್ರತಿ ಜಿಲ್ಲಾ ಮಾಹಿತಿ ಅಧಿಕಾರಿಗಳು, ಎನ್.ಐ.ಸಿ.ವಿಜಯಪುರ ಇವರಿಗೆ ವೆಬ್ ಸೈಟ್‌ನಲ್ಲಿ ಅಳವಡಿಸಲು ತಿಳಿಸಿದೆ.
ಪ್ರತಿ ಶ್ರೀ ಅಡಿವೆಪ್ಪ ಬಾಳಪ್ಪ ತೋರಣಗಟ್ಟಿ ಸಾಕೀನ ನಾವಲಗಟ್ಟಿ ತಾ.ಬೈಲಹೊಂಗಲ ಜಿ.ಬೆಳಗಾವಿ
ಪ್ರತಿ ಶ್ರೀ ರಾಹುಲ್ ರಾಠೋಡ ಸಾಕೀನ, ವಸಂತ ನಗರ, ಇಂಡಿ